ಸ್ವತಃ ಹೇಳಿಕೊಂಡ ಹಾಗೆ – ವಿಚಾರವಾದಿಗಳಿಗಿಂತಲೂ ಹೆಚ್ಚು ವಿಚಾರವಾದಿಗಳು ಎಂದು ನನಗೆ ಕಂಡಿತು!

★★★

ಇಂಥ ಹತ್ತಾರು ಆಲೋಚನೆಗಳು ನಿದ್ದೆ ಬಾರದ ವೇಳೆ ನನ್ನನ್ನು ಎಚ್ಚರವಾಗಿಡುವುದರಿಂದ, ಸಲೀಸಾಗಿ ನಿದ್ದೆ ಬಾರದಿರುವುದು ಒಂದು ಅನುಕೂಲವೆಂದೂ ನನಗೆ ಕೆಲವೊಮ್ಮೆ ಅನ್ನಿಸಿದೆ. ಹೇಗೂ ನಿದ್ದೆ ಬರುವುದಿಲ್ಲವಲ್ಲ ಎಂಬ ಕಾರಣಕ್ಕಾಗಿಯೇ ಹಲವೊಮ್ಮೆ ನಾನು ಮಧ್ಯರಾತ್ರಿ ಕಳೆಯುವವರೆಗೂ ಓದುತ್ತೇನೆ. ಅಲ್ಲದೆ, ಇಡೀ ಹಗಲನ್ನು ಮೆಲುಕು ಹಾಕುವುದಕ್ಕೂ ಕೂಡಾ ರಾತ್ರಿಯ ವೇಳೆ ತುಂಬ ಪ್ರಶಸ್ತವಾದದ್ದು; ಕಾರಣ ಹಗಲಿನ ಸಾದಾ ಗದ್ಯವೆಲ್ಲ ನಿದ್ದೆ ಬಾರದ ಆ ಗಳಿಗೆಗಳಲ್ಲಿ ಛಂದಸ್ಸಿಗೆ ಹೊಂದಿಕೊಂಡು ಪದ್ಯವಾಗಿ ಪರಿವರ್ತಿತವಾಗಿ ನನ್ನನ್ನು ಅಚ್ಚರಿಗೊಳಿಸುತ್ತದೆ. ಗಿರೀಶ ಕಾರ್ನಾಡರು ತಮ್ಮ ಪ್ರಸಿದ್ಧ ನಾಟಕದೊಳಗೆ ಸೃಷ್ಟಿಸಿದ ತುಘಲಕ್‌ನಿಗೂ ಒಮ್ಮೆ ತೀವ್ರವಾಗಿ ಹೀಗನ್ನಿಸಿದೆ:

ನಿದ್ರೆ ಬರದಿರಲಿ ಎಂದು ದೇವರ ಹತ್ತಿರ ಪ್ರಾರ್ಥಿಸುತ್ತಿರುತ್ತೇನೆ. ದಿನವೆಲ್ಲ ಇಂದು ನಾಳಿನ ಗದ್ದಲ! ಆದರೆ, ಬೆಳಕು ಅಳಿದಾಗಲೇ ಅವುಗಳಾಚೆ ಹೆಜ್ಜೆಯಿಡಬಲ್ಲೆ. ರಾತ್ರಿ ಒಮ್ಮೊಮ್ಮೆ ಕೃತ್ತಿಕಾಪುಂಜವನ್ನು ಕಂಡಾಗ, ಅದರಲ್ಲಿ ಶಹಾಮೃಗದ ಹೊಳೆಯುವ ತತ್ತಿಗಳನ್ನು ಕಂಡ ಕವಿ ಇಬ್ನ –ಅಲ–ಮೊತ್ತಝುನಿಂದ ಆ ಪುಂಜವೆಂದರೆ ಸ್ವಚ್ಛಂದ ಗಿರಕಿ ಹಾರುವ ಸಾರಸ ಎಂದು ವರ್ಣಿಸಿದ ದುರ್‍ರುಮ್ಮಾನನವರೆಗೆ ಎಲ್ಲರ ನೆನಪಾಗುತ್ತದೆ... ಆದರೆ ನೆಲದಲ್ಲಿ ಬೇರಿಳಿಯುವ ಮೊದಲು ನಕ್ಷತ್ರಗಳಲ್ಲಿ ಟೊಂಗೆ ಬಿಚ್ಚುವುದಾದರೂ ಹೇಗೆ? ನನ್ನ ಹಿಂದೂ ಪ್ರಜೆಗಳಂತೆ ನನಗೂ ಪುನರ್ಜನ್ಮದಲ್ಲಿ ವಿಶ್ವಾಸವಿದ್ದರೆ ಎಷ್ಟು ಒಳ್ಳೆಯದಾಗುತ್ತಿತ್ತು, ತಾಯಿ. ಆದರೆ ನನಗಿರುವುದು ಒಂದೇ ಜನ್ಮ, ಒಂದೇ ದೇಹ. ಅದಕ್ಕಾಗಿ ನನ್ನ ಪ್ರಜೆ, ನನ್ನ ಆಕಾಂಕ್ಷೆ, ನನ್ನ ದೇವರು ಎಳೆದಾಡುತ್ತಿದ್ದಾಗ ನಿದ್ರೆಗೆಲ್ಲಿ ಸ್ಥಾನ ಕೊಡಲಿ ನೀನೇ ಹೇಳು... (ದೃಶ್ಯ 2)

ಹಾಗಿದ್ದರೂ, 'ನಿದ್ರೆ ಬರದಿರಲಿ' ಎಂದು ತುಘಲಕ್‌ನ ಹಾಗೆ ಪ್ರಾರ್ಥಿಸುವುದಕ್ಕೂ ನನಗೆ ಇಷ್ಟವಾಗುವುದಿಲ್ಲ. ಕಾರಣ, ನಿದ್ದೆ ಬರದೆ ಇರುವ ಸನ್ನಿವೇಶಗಳಲ್ಲಿ ಸಾದಾ ಮನುಷ್ಯರೂ ತುಸು ಅಮಾನವೀಯ ಪ್ರವೃತ್ತಿಯ ಕಡೆಗೆ ಒಲಿಯುತ್ತಾರೇನೋ ಎಂಬೊಂದು ಸಂದೇಹ ಅಂಥ ಗಳಿಗೆಗಳಲ್ಲಿ ಸಾಕ್ಷಾತ್ತಾಗಿ ನನ್ನ ಅನುಭವಕ್ಕೆ ಬಂದದ್ದಿದೆ. ಉದಾಹರಣೆಗೆ, ನನಗೆ ನಿದ್ದೆ ಬಾರದೆ ಇರುವಾಗ, ಸುತ್ತ ಹತ್ತಾರು ಜನ ಸುಖವಾಗಿ ನಿದ್ದೆ ಮಾಡುತ್ತಿದ್ದರೆ, ನನಗೆ ನಿದ್ದೆ ಬಂದಿಲ್ಲವೆಂಬ ಆತಂಕ ಇಮ್ಮಡಿಯಾಗುವುದನ್ನು ನಾನು ಹಲವಾರು ಬಾರಿ ಅನುಭವಿಸಿದ್ದೇನೆ. ಅಂಥ ಆತಂಕದ ಗಳಿಗೆಯಲ್ಲಿ ನಿದ್ದೆ ಮಾಡಿದವರನ್ನು ಹೇಗಾದರೂ ಎಬ್ಬಿಸಬೇಕು ಎಂಬ ಕುಟಿಲ ಪ್ರವೃತ್ತಿಯೂ ನನ್ನ ಮನಸ್ಸಿನಲ್ಲಿ ಹಣಕಿಹಾಕಿದ್ದಿದೆ. ಆರಂಭದ ಕೆಲಕೆಲವು ದಿನ, ನನಗೆ ನಿದ್ದೆ ಬಾರದೆ ಇದ್ದಾಗ, ನನ್ನ ಹೆಂಡತಿಯು ಆರಾಮಾಗಿ ನಿದ್ದೆ ಮಾಡುತ್ತಿರುವುದನ್ನು ನೋಡಿ ಹೊಟ್ಟೆಕಿಚ್ಚಾಗುತ್ತಿತ್ತು. ಆದರೆ, ಮಾರನೆಯ ದಿನವೇ ಆಕೆ – 'ನೀನು ಆರಾಮಾಗಿ ನಿದ್ದೆ ಮಾಡಿದ್ದೆ, ನನಗೆ ಮಾತ್ರ ನಿದ್ದೆಯೇ ಬರಲಿಲ್ಲ' ಎಂದು ಹೇಳಿದಾಗ, 'ಓಹೋ ಹೀಗೂ ಉಂಟೆ?' ಎಂದು ನನ್ನ ಲೆಕ್ಕಾಚಾರ ತಲೆಕೆಳಗಾಗಿದ್ದಿದೆ. ಈಚೀಚೆಗೆ, ನಮ್ಮ ದಾಂಪತ್ಯವು ಪಕ್ವವಾಗುತ್ತಿರುವ ಪರೋಕ್ಷ ಸೂಚನೆಯೋ ಎಂಬಂತೆ, ಇಬ್ಬರಿಗೂ ಸಮಾನವಾಗಿ ಸಾಕಷ್ಟು ಹೊತ್ತು ನಿದ್ದೆ ಬರುವುದಿಲ್ಲ. ನಾನು ಅವಳನ್ನು ವಿಚಾರಿಸಲಿಕ್ಕೆ ತಲೆ ಎತ್ತುತ್ತಿರುವಂತೆಯೇ ಆಕೆ – 'ನನಗೂ ನಿದ್ದೆ ಹತ್ತುತ್ತಿಲ್ಲ' ಎನ್ನುವ ಮೂಲಕ ನನಗೆ ಸಾಂತ್ವನ ನೀಡುತ್ತಾಳೆ.